ಮಾತು ಹೇಳುವುದನ್ನು ಮರೆಯುವುದಿಲ್ಲ'ನಮ್ಮ ಮಕ್ಕಳೂ ಮದುವೆ ಮಾಡಿಕೊಂಡಿದ್ದಾರೆ; ಆದರೆ ನೀತಾ ನಿನಗೆ ನಾವೆಲ್ಲ ಸಲಾಮ್ ಹೊಡೀತೀವಿ. ನಮ್ಮೆಲ್ಲ ಮಕ್ಕಳಲ್ಲಿ ಎಲ್ಲರಿಗಿಂತ ಸುಖವಾಗಿ ಖುಷಿಯಿಂದ ಇರುವವಳು ನೀನಾಗಿರುವೆ'. ಅದು ಉತ್ಪ್ರೇಕ್ಷೆ ಆಗಿರಲಿಲ್ಲ. ನೀತಾ ತಮ್ಮ ಬದುಕಿನ ನಿರ್ಧಾರಗಳನ್ನು ಸ್ವತಃ ತೆಗೆದುಕೊಂಡಿದ್ದರು. ಆಯ್ದು ಬದುಕಿನ ಹಾದಿಯಲ್ಲಿ ಭಾವೇಶ್ ಅವರ ಕೈ ಹಿಡಿದು ನಡೆದಿದ್ದರು. ಜಗತ್ತಿನೆಲ್ಲ ಪ್ರೀತಿಯನ್ನು ಭಾವೇಶ್ ಅವರ ಮಡಿಲಿಗೆ ಸುರಿದಿದ್ದರು.

ಭಾವೇಶ್ ಅವರಿಗೆ ಇರುವ ಒಂದೇ ಒಂದು ವಿಷಾದವೆಂದರೆ, ತಮ್ಮ ಮಗಳು–ಅಳಿಯನ ಯಶಸ್ಸನ್ನು ನೋಡುವವರೆಗೆ ಆಕೆಯ ತಂದೆ ಮತ್ತು ತಾಯಿ ಜೀವಂತವಿರಲಿಲ್ಲ. ಅವರು ಈ ಭೂಮಿಯ ಮೇಲೆ ಇದ್ದಿದ್ದರೆ, ಅದೆಷ್ಟು ಸಂತಸಪಡುತ್ತಿದ್ದರೋ. ರಾತ್ರಿ ಆಗಸದಲ್ಲಿ ಹೊಳೆವ ಅಸಂಖ್ಯಾತ ನಕ್ಷತ್ರಗಳಲ್ಲಿ ಈ ದಂಪತಿಗಳಿಗೆ ತಮ್ಮ ಅಗಲಿದ ಹಿರಿಯರ ಪ್ರೀತಿ ವಾತ್ಸಲ್ಯ ಆಶೀರ್ವಾದದ ಸುರಿಮಳೆಯ ಅನುಭವವಾಗುತ್ತದೆ. ಅಂತಹ ಮೌನ ರಾತ್ರಿಗಳು ಮನಸ್ಸಿಗೆ ನೆಮ್ಮದಿ ತಂದಿವೆ.

ಅಧ್ಯಾಯ12

**ತಿಲಕ್ ಸ್ಮಾರಕ್ ಬದುಕಿನಲ್ಲಿ ಒಂದು ತಿರುವು**

ಭಾವೇಶ್ ಭಾಟಿಯಾ 1995ರಲ್ಲಿ ಎನ್.ಎ.ಬಿ. ನಲ್ಲಿ ಮೋಂಬತ್ತಿ ಮಾಡುವುದನ್ನು ಅನಧಿಕೃತವಾಗಿ ಕಲಿತಿದ್ದರು. ಅವರು ಮೋಂಬತ್ತಿ ತಯಾರಿಸುವ ಉದ್ಯಮವನ್ನು ಆರಂಭಿಸಿ ವರ್ಷ ವರ್ಷಗಳು ಉರುಳಿದ್ದವು. ಇಸವಿ 2004ರಲ್ಲಿ ಜನವರಿ 5ರಿಂದ ಏಪ್ರಿಲ್ 30ರವರೆಗೆ ಎನ್.ಎ.ಬಿ.ಯಲ್ಲಿ ಆಯೋಜಿಸಿದ್ದ ಅಲಂಕಾರಿಕ ಫ್ಯಾನ್ಸಿ ಕ್ಯಾಂಡಲ್ ತಯಾರಿಕೆಯ ತರಬೇತಿಯಲ್ಲಿ ಭಾವೇಶ್ ಭಾಗ ವಹಿಸಿ ಅಧಿಕೃತವಾಗಿ ಸರ್ಟಿಫಿಕೇಟ್ ಪಡೆದರು. ಎನ್.ಎ.ಬಿ.ಯ ಪ್ರಮಾಣ ಪತ್ರ ತಮ್ಮ ಉದ್ಯಮಕ್ಕೆ ಅಗತ್ಯವಲ್ಲದಿದ್ದರೂ, ಅನುಕೂಲವಾಗಬಹುದು ಎಂಬ ಭಾವನೆ ಅವರದಾಗಿತ್ತು.

ಮಹಾಬಲೇಶ್ವರದ ಅಲ್ಲಿಯವರೆಗಿನ ಇತಿಹಾಸ ದಲ್ಲಿ 'ಮಹಾಬಲೇಶ್ವರ ಹಬ್ಬ' ಒಮ್ಮೆ ಮಾತ್ರ ಆಯೋಜಿಸಲಾಗಿತ್ತು. ಅದರಲ್ಲಿ ದೊಡ್ಡ ದೊಡ್ಡ ಕಂಪನಿಗಳು ಅಂಗಡಿ ಹಾಕಲಿದ್ದರು. ಬಹಳಷ್ಟು ಸುಪ್ರಸಿದ್ಧರು, ಸೆಲೆಬ್ರಿಟಿಗಳು ಬರಲಿದ್ದರು. ಹಬ್ಬದ ದಿನ ಹತ್ತಿರವಾಗುತ್ತಿದ್ದಂತೆ, ಇಡೀ ಮಹಾಬಲೇಶ್ವರದಲ್ಲಿ ಕುತೂಹಲ ಹೆಚ್ಚುತ್ತಾ ಹೋಗಿತ್ತು. ಅಲ್ಲಿ ತಮಗೊಂದು ಸ್ಟಾಲ್ ಸಿಗಲಿ ಎಂಬ ಆಸೆ ಭಾವೇಶ್ ಅವರದು. ಆದರೆ ಮೂರು ದಿನಗಳ ಸ್ಟಾಲ್‌ಗೆ 20,000 ರೂಪಾಯಿಗಳ ಬಾಡಿಗೆ. ಇದು ಭಾವೇಶ್ ಅವರ ಸಾಮರ್ಥ್ಯಕ್ಕೆ ಮೀರಿದ್ದಾಗಿತ್ತು. ಹಾಗಾಗಿ ಸ್ಟಾಲ್ ಪಡೆಯುವುದು ಹೇಗೆ ಎಂದು ಅರ್ಥವಾಗಿರಲಿಲ್ಲ. ಇದೇ ಸಮಯದಲ್ಲಿ ಮಹಾಬಲೇಶ್ವರದ ಲಯನ್ಸ್ ಕ್ಲಬ್‌ನಿಂದ ದೂರವಾಣಿ ಕರೆ ಬಂದಿತು. ಅದರ ಅಧ್ಯಕ್ಷರು ಫೋನಿನಲ್ಲಿ ಇದ್ದರು. ಆಕೆಯ ಪರಿಚಯ ಭಾವೇಶ್ ಮತ್ತು ನೀತಾ ಇಬ್ಬರಿಗೂ ಇತ್ತು. ಅವರು ಹೇಳಿದರು – 'ಭಾವೇಶ್ ಭಾಯಿ, ಮಹಾಬಲೇಶ್ವರ ಹಬ್ಬದ ಆಯೋಜಕರ ಪರವಾಗಿ ನಮ್ಮ ಕ್ಲಬ್‌ಗೆ ಒಂದು ಸ್ಟಾಲ್ ಸಿಕ್ಕಿದೆ. ನಿಮಗೆ ಗೊತ್ತೇ ಇದೆ, ನಮ್ಮಲ್ಲಿ ಆ ಸ್ಟಾಲ್‌ನಲ್ಲಿ ಇಡುವಂತಹ ವಸ್ತುಗಳೇನೂ ಇಲ್ಲ. ನಾವು ಕೇವಲ ಒಂದು ಮೇಜು ಇಟ್ಟು ನಮ್ಮ ಕ್ಲಬ್ ಅನ್ನು ಪ್ರೊಮೋಟ್ ಮಾಡಲು ಇಚ್ಛಿಸುತ್ತಿಲ್ಲ. ಅದಕ್ಕೆ ಆ ಸ್ಟಾಲ್‌ನಲ್ಲಿ ನಮ್ಮ ಬ್ಯಾನರ್ ಹಾಕುತ್ತೇವೆ, ನೀವು ನಿಮ್ಮ ಮೋಂಬತ್ತಿಗಳನ್ನು ತಂದು ಇಡಿ. ಈ ರೀತಿ ನೀವು ನಾವು ಜೊತೆಗಾರರಾಗುತ್ತೇವೆ. ನಮಗೂ ನಿಮ್ಮ ಮೋಂಬತ್ತಿಗಳನ್ನು ಪ್ರಚಾರ ಮಾಡಿದ ಖುಷಿ ಸಿಗುತ್ತದೆ' ಎಂದರು.

ಭಾವೇಶ್ ಏನನ್ನು ಬಯಸಿದ್ದರೋ, ಅದು ನಿರಾಯಾಸವಾಗಿ ಅವರಿಗೆ ದೊರೆತಿತ್ತು. ತಕ್ಷಣ ಅವರಿಗೆ ಒಪ್ಪಿಗೆ ಸೂಚಿಸಿದರು. ಅದೇ ಸಂಜೆ ಭಾವೇಶ್ ಮತ್ತು ನೀತಾ ಅವರನ್ನು ಭೇಟಿಯಾಗಲು ಹೋದರು. ಎಲ್ಲವನ್ನು ಮಾತನಾಡಿ ಯೋಜಿಸಿದರು. ಭಾವೇಶ್ ಅವರ ತಯಾರಿ ಜೋರಾಗಿ ನಡೆಯಿತು. ಹಬ್ಬದಲ್ಲಿ ಲಯನ್ಸ್ ಕ್ಲಬ್‌ಗೆ ದೊಡ್ಡ ಸ್ಟಾಲನ್ನೇ ಕೊಟ್ಟಿದ್ದರು. ಅದರಲ್ಲಿ ಅವರು ತಮ್ಮ ಬ್ಯಾನರ್ ಹಾಕಿದರು. ಸ್ಟಾಲ್ ಅನ್ನು ಮೋಂಬತ್ತಿ ಮಾರಲು ಅನುಕೂಲವಾಗುವಂತೆ ಅಲಂಕರಿಸಲಾಯಿತು. ಇದು ನಿಜಕ್ಕೂ ಅದ್ಭುತ ಅನುಭವವಾಗಿತ್ತು. ಇಂತಹ ದೊಡ್ಡ ಹಬ್ಬದಲ್ಲಿ ಇಷ್ಟು ದೊಡ್ಡ ಸ್ಟಾಲ್ ಹಾಕುವ ಅವಕಾಶ ಅವರದಾಗಿತ್ತು. ಮಹಾಬಲೇಶ್ವರದ ಸುತ್ತಮುತ್ತಲಿನ ಊರುಗಳಿಗೆ, ಅಂದರೆ ವಾಯಿ, ಪಂಚ್ಗನೀ, ಸತಾರಾ ಮುಂತಾದ ಊರುಗಳವರೆಗಿನ ಜನರಿಗೆ ಭಾವೇಶ್ ಅವರ ಮೋಂಬತ್ತಿಗಳು ಪರಿಚಯವಾದವು. ಆ ಸಣ್ಣ ಪಟ್ಟಣಗಳ ಜನರು ಮೋಂಬತ್ತಿಗಳ ಇಷ್ಟೊಂದು ವಿನ್ಯಾಸಗಳನ್ನು ಬಹುಶಃ ಇಲ್ಲಿಯವರೆಗೂ ನೋಡಿರಲಿಲ್ಲ. ಆ ಹಬ್ಬದಲ್ಲಿ ಭಾವೇಶ್ ಅವರ ಅಂಗಡಿ ವಿಶೇಷ ಆಕರ್ಷಣೆಯ ತಾಣವಾಗಿತ್ತು.

ಅಲ್ಲಿಗೆ ನಗರ ಸೇವಕರು, ನಗರ ಅಧ್ಯಕ್ಷರು, ಬಹಳಷ್ಟು ಪತ್ರಕಾರರು ಬಂದಿದ್ದರು. 'ಲೋಕ್ಮತ್' ಗ್ರೂಪ್‌ನ ಪತ್ರಕಾರರಾದ ಸಂಜಯ್ ದುಸ್ತುರೆ, ಅಲ್ಲಿಗೆ ಬಂದ ಪ್ರತಿಷ್ಠಿತ ವ್ಯಕ್ತಿಗಳನ್ನು ಇವರ ಅಂಗಡಿಗೆ ಕರೆತಂದರು. ಲೋಕ್ಮತ್ 1918ರಲ್ಲಿ ಸ್ವಾತಂತ್ರ್ಯ ಹೋರಾಟಗಾರರಿಂದ ಮಹಾರಾಷ್ಟ್ರದಲ್ಲಿ ಆರಂಭವಾಗಿತ್ತು. ಆ ಹಬ್ಬದ ಸಮಾರಂಭಕ್ಕೆ ಬಂದ ಚೆಫ್ ಸಂಜೀವ್ ಕಪೂರ್, ಗಾಯಕಿ ಆಶಾ ಭೋಸ್ಲೆ, ವೈಶಾಲೀ ಸಾಮಂತ್ ಮುಂತಾದ ಸುಪ್ರಸಿದ್ಧರನ್ನು ಭಾವೇಶ್ ಅವರ ಸ್ಟಾಲ್ ಬಳಿಗೆ ಸಂಜಯ್ ಕರೆ ತಂದಿದ್ದರು. ಇದರ ಫಲವಾಗಿ ಭಾವೇಶ್ ಅವರಿಗೆ ಆ ಎಲ್ಲರ ಪರಿಚಯವಾಗಿತ್ತು. ಆ ಹಬ್ಬದಲ್ಲಿ ಅನೇಕ ರಾಜ್ಯಗಳಿಂದ ಬೇರೆ ಬೇರೆ ವಸ್ತುಗಳನ್ನು ತಂದು ಸ್ಟಾಲ್ ಹಾಕಿದವರೂ ಇದ್ದು, ಅವರ ಪರಿಚಯವೂ ಆಗಿತ್ತು.

ಈ ಹಬ್ಬದಲ್ಲಿ ಇನ್ನೊಂದು ಅದ್ಭುತ ವಿಷಯವೂ ನಡೆಯಿತು. ಬಹುಶಃ ಅದು ಹಬ್ಬದ ಮೂರನೇ ದಿನದ ಸಂಜೆ. ಮಹಾಬಲೇಶ್ವರದ ಬಸ್ಸು ನಿಲ್ದಾಣ ದಿಂದ ಏಳು ಕಿಲೋಮೀಟರ್ ದೂರದಲ್ಲಿ 'ಆನಂದ್ ವನ್ ಭುವನ್ ಹೋಟೆಲ್' ಇದೆ. ಆ ಹೋಟೆಲಿನ ಮಾಲೀಕರಾದ ಶ್ರೀಮತಿ ರೋಹಿಣಿ ವೈದ್ಯ ಅವರು ಸ್ಟಾಲ್ ಬಳಿಗೆ ಬಂದರು. ಆಕೆ ಇನ್ನರ್ ವ್ಹೀಲ್ ಕ್ಲಬ್‌ನ ಡಿಸ್ಟ್ರಿಕ್ಟ್ ಗವರ್ನರ್ ಆಗಿದ್ದವರು. ಅವರ ಹೋಟೆಲೇ ಒಂದು ನವೀನ ಮಹಾಬಲೇಶ್ವರದಂತಿದೆ. ಕಾರಣ 50 ಎಕರೆ ಜಮೀನಿನ ತುಂಬಾ ಅವರ ಹೋಟೆಲ್ ಹರಡಿ ನಿಂತಿದೆ. ಅದರ ಭೂಗೋಳಿಕ ಸಂರಚನೆಯಿಂದಾಗಿ ಪ್ರವಾಸಿಗರಿಗೆ ಬಲು ಇಷ್ಟವಾದ ತಾಣ. ಆ ದಿನ ರೋಹಿಣಿ ಮೇಡಂ ಅವರೊಡನೆ ಅವರ ಸೊಸೆ ಸಾಹಿಲೀ, ಮೊಮ್ಮಗಳು ಅನ್ವಿತಾ ಮತ್ತು ಮ್ಯಾನೇಜರ್ ಆಕಾಶ್ ಪವಾರ್ ಕೂಡ ಇದ್ದರು. ಅವರಿಗೆ ಭಾವೇಶ್ ಅವರ ಮೋಂಬತ್ತಿಗಳು ತುಂಬಾ ಇಷ್ಟವಾದವು. ಮಾತನಾಡುತ್ತಾ, ಮಾತನಾಡುತ್ತಾ ಭಾವೇಶ್ ಮತ್ತು ನೀತಾ ಅವರಿಗೆ ಅವರೊಡನೆ ಆತ್ಮೀಯತೆ ಮೂಡಿತು. ಅವರು ವಿದಾಯ ಹೇಳುವ ಮೊದಲು, ಹೇಳಿದರು – 'ಅರೆ, ಈ ಮೋಂಬತ್ತಿಗಳ ಒಂದು ಸ್ಥಾಯಿ ಅಂಗಡಿಯನ್ನು ನಮ್ಮ ಹೋಟೆಲ್ ಆನಂದ್ ವನ್ ಭುವನ್‌ನಲ್ಲಿ ಹಾಕಬಹುದಲ್ಲ?' ಜೊತೆಗೇ ಹೇಳಿದರು, ಆ ಸ್ಟಾಲ್‌ಗೆ ಭಾವೇಶ್ ಅವರು ಯಾವ ಬಾಡಿಗೆಯನ್ನೂ ಕೊಡಬೇಕಿಲ್ಲ, ಕಮಿಷನ್ ನೀಡಬೇಕಿಲ್ಲ. ಅವರು ಭಾವೇಶ್ ಅವರಿಗೆ ಸಹಾಯ ಮಾಡಲು ಬಯಸಿದ್ದರು. ಭಾವೇಶ್ ಅವರ ಸಂತಸಕ್ಕೆ ಪಾರವೇ ಇರಲಿಲ್ಲ. ಬದುಕು ಅವರ ಪ್ರಯತ್ನಕ್ಕೆ ಮೆಚ್ಚಿ, ಅದೃಷ್ಟದ ಒಂದೊಂದೇ ಬಾಗಿಲನ್ನು ತೆರೆದಂತಿತ್ತು.

ಹಬ್ಬ ಮುಗಿದೊಡನೆ ಭಾವೇಶ್ ಮತ್ತು ನೀತಾ ಒಂದೇ ವಾರದೊಳಗೆ ಹೋಟೆಲ್ ಆನಂದ್ ವನ್ ಭುವನ್‌ನಲ್ಲಿ ತಮ್ಮ ಸ್ಟಾಲ್ ಹಾಕಿಬಿಟ್ಟರು. ತಮ್ಮೆಡೆಗೆ ಬಂದ ಅವಕಾಶಗಳನ್ನು ಕೃತಜ್ಞತೆಯಿಂದ ಸ್ವೀಕರಿಸಿ, ಅಷ್ಟೇ ಶ್ರಮ ಹಾಕಿ ಅಲ್ಲೊಂದು ಸ್ಟಾಲ್ ಇರಿಸಿದರು. ಅದು 2005ರ ಏಪ್ರಿಲ್ ಅಥವಾ ಮೇ ತಿಂಗಳ ಮಾತು. ಅಲ್ಲಿ ಆನಂದ್ ವನ್ ಭುವನ್‌ನ ಸ್ಟಾಲ್‌ಗೆ ದೊರೆತ ಸಹಾಯದಿಂದ, ಅವರಿಗೆ ಪೂರಾ ವೈದ್ಯ ಪರಿವಾರದೊಡನೆ ಬಾಂಧವ್ಯ ಗಾಢವಾಯಿತು. ರೋಹಿಣಿ ವೈದ್ಯ ಅವರ ಪುತ್ರರಾದ ಸಚಿನ್ ಅವರು ಹೋಟೆಲಿನ ಪುಣೆಯ ಕಾರ್ಯಾಲಯವನ್ನು ನೋಡಿ ಕೊಳ್ಳುತ್ತಿದ್ದರು. ಅವರು ವಾಸಿಸುತ್ತಾ ಇದ್ದದ್ದು ಕೂಡ ಪುಣೆಯಲ್ಲಿಯೇ. ಹಾಗಾಗಿ ಭಾವೇಶ್ ಮತ್ತು ಸಚಿನ್ ಅವರ ಭೇಟಿ ಆಗಿರಲಿಲ್ಲ. ಸಚಿನ್ ಅವರ ಜನ್ಮದಿನವೂ ಕುಣಾಲನ ಜನ್ಮ ದಿನವಾದ 19 ನವೆಂಬರ್ ಆಗಿತ್ತು. ಈ ಮಾತು ಭಾವೇಶ್ ಅವರ ನೆನಪಿನಲ್ಲಿ ಉಳಿದಿತ್ತು. 19 ನವೆಂಬರ್ ಬಂದಾಗ, ಅವರಿಗೆ ಫೋನ್ ಮಾಡಿ ಜನ್ಮದಿನದ ಶುಭಾಶಯವನ್ನು ಕೋರಿದರು. ಅದರ ನಂತರ ಅವರ ನಡುವೆ ಸ್ನೇಹ ಬೆಳೆದು ಅನೇಕ ಬಾರಿ ಫೋನಿನಲ್ಲಿ ಅವರು ಮಾತನಾಡುವುದು ನಡೆದಿತ್ತು. ಒಂದು ದಿನ ಏಕಾಏಕಿ ಸಚಿನ್, ಭಾವೇಶ್ ಅವರ ಚರ್ಚ್‌ನ ಎದುರಿನ ಸ್ಟಾಲ್‌ಗೆ ಬಂದರು. ಆ ದಿನ ಪುಟ್ಟ ಕುಣಾಲ್ ಕೂಡಾ ಅವರ ಜೊತೆಗೆ ಇದ್ದ. ಅವರು ಕುಣಾಲ್‌ಗೆ ಚಾಕೊಲೇಟ್ ಕೊಟ್ಟರು. ಇದು ಸಚಿನ್ ಅವರೊಡನೆ ಭಾವೇಶ್ ಅವರ